ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ

ಸಿ.ಸಿ. ನಂಬ್ರಃ **111/2024**
ಸಿ.ಡಬ್ಲ್ಯೂ **9**
ಪಿ.ಡಬ್ಲ್ಯೂ-7

ಸಾಕ್ಷಿದಾರರ ಹೆಸರು ಃ ಸುನೀಲ್ ಕುಮಾರ್

ತಂದೆಯ ಹೆಸರು ಃ ಶಂಕರ್

ಪ್ರಾಯ ಃ 43 ವರ್ಷ

ಉದ್ಯೋಗ ಃ ಪಿ.ಐ ಮಹಿಳಾ ಠಾಣೆ, ದಕ್ಷಿಣ ಕನ್ನಡ

ವಾಸ ಃ ಮಂಗಳೂರು

ದಿನಾಂಕಃ 16-12-2024 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ

ನಾನು 2016 ರಿಂದ 2018 ಸೆಪ್ಟೆಂಬರ್‌ರವರೆಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕಃ 14-10-2016 ರಂದು ಕಡತವನ್ನು ಚಾಸಾ 8 ರವರಿಂದ ಪಡೆದುಕೊಂಡು ಪರಿಶೀಲಿಸಿ, ಸದರಿ ಪ್ರಕರಣದಲ್ಲಿ ದಿನಾಂಕ 14-10-2016 ರಂದು ಕಾರ್ ನ ಮಾಲೀಕರಾದ ಆರೋಪಿತ ದಿನಕರ್ ಶೆಟ್ಟಿಯವರಿಗೆ ಕಲಂ 133 ರಡಿಯಲ್ಲಿ ನೋಟಿಸು ಕೊಟ್ಟು, ಉತ್ತರದೊಂದಿಗೆ ಕಾರಿನ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಕಲಂ 133 ರಅಡಿಯಲ್ಲಿನ ನೋಟಿಸು ಹಾಗೂ ಉತ್ತರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.10 ಮತ್ತು ನಿ.ಪಿ.11 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ. 10(ಎ) ಮತ್ತು ನಿ.ಪಿ.11 (ಎ) ಎಂದು ಗುರುತಿಸಲಾಯಿತು. ನಂತರ ಸೂಕ್ತ ಜಾಮೀನೊಂದಿಗೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿ ಇಂಡಿಮೇನಿಟಿ ಬಾಂಡ್ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು.

3. ದಿನಾಂಕ 27-10-2016 ರಂದು ಸದರಿ ಅಪಘಾತಗೊಂಡ ಗಾಯಾಳುಗಳಾದ ಚಾಸಾ 1 ಮತ್ತು 2 ಹಾಗೂ ಸಿಂಚನರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ 10 ರವರಿಂದ

ಪಡೆದುಕೊಂಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿ.ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 13(ಎ) ಎಂದು ಗುರುತಿಸಲಾಯಿತು. ಕೆ ಎ 19 ಡಿ -2928 ಆಟೋರಿಕ್ಷಾ ಹಾಗೂ ಕೆ ಎ 20 ಎಮ್ ಎ 6822 ರ ಕಾರುಗಳ ಫೋಟೋವನ್ನು ಪಡೆದುಕೊಂಡು ಅಳವಡಿಸಿಕೊಂಡಿರುತ್ತೇನೆ. ಸದರಿ ಫೋಟೋಗಳನ್ನು ಈಗಾಗಲೇ ನಿ.ಪಿ.3 ರಿಂದ ನಿ.ಪಿ.6 ಎಂದು ಗುರುತಿಸಲಾಗಿದೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ನಂತರ ದೋಷರೋಪಣೆ ಪಟ್ಟಿಯನ್ನು ನ್ಯಾಯಲಯಕ್ಕೆ ಸಲ್ಲಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿ ಪರ ಬಿ.ಆರ್.ಎನ್.ವಕೀಲರಿಂದ</u>

1. ನಾನು ಹಾಜರು ಪಡಿಸಿರುವ ಕಚ್ಚಾ ನಕಾಶೆಯಂತೆ ಅಪಘಾತದ ಸ್ಥಳ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಆಟೋ ರಿಕ್ಷಾ ಹೋಗುವಾಗ ತಿರುವಿನಲ್ಲಿ ವೇಗವಾಗಿ ಹೋಗಿ ತಮ್ಮ ಅಜಾಗರುಕತೆಯಿಂದ ಅಪಘಾತಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಟೋ ರಿಕ್ಷಾದ ಒಳಗಡೆ 3 ಜನ ಪ್ರಯಾಣಿಕರಿದ್ದರು. ಸದರಿ ಮೂರು ಜನ ಪ್ರಯಾಣಿಕರು ನನ್ನ ಸಮಕ್ಷಮ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರ್. ಸಿ ಓನರ್ ದಿನಕರ ಶೆಟ್ಟಿ ಯವರಿಗೆ ವಾಹನ ಒತ್ತಡ ಹೇರಿ ಕಲಂ 133 ಕ್ಕೆ ಸಹಿ ಹಾಗೂ ಉತ್ತರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಹಜರನ್ನು ನನ್ನ ಅಧೀನ ಅಧಿಕಾರಿಗಳು ಮಾಡಿದ್ದು, ಅದನ್ನು ಪರಿಶೀಲಿಸದೆ ಪ್ರಕರಣಕ್ಕೆ ಒಳಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕಾರು ಆಟೋ ರಿಕ್ಷಾಗಿಂತ ದೊಡ್ಡ ವಾಹನ ಆಗಿದ್ದರಿಂದ ಅದರ ಮೇಲೆ ನಾನು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕಾರು ಚಾಲಕ ಯಾವುದೇ ರೀತಿಯಿಂದಲು ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ವಿಮಾ ಪರಿಹಾರಣಕ್ಕೆ ಸಹಾಯ ಆಗಲಿ ಅಂತ ಆರೋಪಿತನ ವಿರುದ್ದ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ವಾಹನ ಈ ಅಪಘಾತದಲ್ಲಿ ಒಳಗೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ